ಸಭಾಧ್ಯಕ್ಷರು : ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

(ಸಭೆಯಲ್ಲಿ ಒಂದು ನಿಮಿಷದ ಕಾಲ ಮೌನಾಚರಣೆ ಮಾಡಲಾಯಿತು.)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಅಧ್ಯಕ್ಷರಲ್ಲಿ ಹಾಗೂ ವಿರೋಧ ಪಕ್ಷದ ನಾಯಕರಲ್ಲಿ ಒಂದು ವಿನಂತಿ. ಇವತ್ತು ನಮ್ಮ ಪೂರಕ ಅಂದಾಜನ್ನು ಆದ್ಯತೆಯಲ್ಲಿ ಚರ್ಚೆಗೆ ಕೈಗೆತ್ತಿಕೊಂಡು ಮುಗಿಸಿ ಕೊಡಬೇಕೆಂದು ವಿನಂತಿ.

ಶ್ರೀ ಸಿದ್ದರಾಮಯ್ಯ : ಬರಗಾಲದ ಬಗ್ಗೆ ಬಹಳ ಮುಖ್ಯ ಇದೆ.

ಸಭಾಧ್ಯಕ್ಷರು : ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳಬಹುದಾ?

ಶ್ರೀ ಸಿದ್ದರಾಮಯ್ಯ : ಬಹಳ important ಇದು. ಎಲ್ಲವನ್ನೂ ಮುಂದಕ್ಕೆ ಹಾಕಿ ಇದರ ಬಗ್ಗೆ ಚರ್ಚೆ ಮಾಡಬೇಕು. ಕಳೆದ ಬಾರಿ ಚರ್ಚೆ ಮಾಡುವಾಗ Blue film ನೋಡುತ್ತಿದ್ದರು. ಅದು ಹಾಗೆಯೇ ಹೊರಟು ಹೋಯಿತು. ಚರ್ಚೆನೂ ಆಗಲಿಲ್ಲ. ಸರ್ಕಾರ ಉತ್ತರನೂ ಕೊಡಲಿಲ್ಲ. ಈಗ ನಾವು ಚರ್ಚೆ ಮಾಡೋಣ ಎಂದರೆ question ಆದ ಮೇಲೆ ಎನ್ನುತ್ತೀರಿ. ಈಗ ನಾನೇನು ಹೇಳುವುದು ಎಂದರೆ question ಆದ ತಕ್ಷಣ ತೆಗೆದು ಕೊಳ್ಳುತ್ತೀರಾ?

ಸಭಾಧ್ಯಕ್ಷರು : ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಪ್ರಶ್ನೋತ್ತರ ಆದ ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಶಾಸಕರೆಲ್ಲಾ ನಮ್ಮ ಪ್ರಶ್ನೆಗೆ ಉತ್ತರ ಸಿಗಲಿಲ್ಲ ಎಂದು ಹೇಳುತ್ತಿದ್ದಾರೆ. ಇದಾದ ಮೇಲೆ ಪೂರಕ ಅಂದಾಜು ತೆಗೆದುಕೊಳ್ಳೋಣ. ಅದೇನು 5 ನಿಮಿಷದಲ್ಲಿ pass ಮಾಡಿಕೊಡುತ್ತೇವೆ. Its not a very big thing.

ಶ್ರೀ ಡಿ.ವಿ. ಸದಾನಂದಗೌಡ : ಅಲ್ಲ ನಮ್ಮ ಪ್ರತಿಪಕ್ಷದ ನಾಯಕರು ಹೇಳಿದ್ದಕ್ಕೆ ನನ್ನದು ಸಹಮತ ಇದೆ. ಬರ ಒಂದು ಗಂಭೀರವಾದ ವಿಚಾರ.

ಶ್ರೀ ಸಿದ್ದರಾಮಯ್ಯ : ಚರ್ಚೆ ಆಗಬೇಕು, ಮಾನ್ಯ ಅಧ್ಯಕ್ಷರೆ,

ಶ್ರೀ ಡಿ.ವಿ. ಸದಾನಂದಗೌಡ : ಚರ್ಚೆ ಮಾಡಲು ನಮಗೇನೂ ಅಭ್ಯಂತರವಿಲ್ಲ. ಆದರೆ ಪ್ರಶ್ನೋತ್ತರದ ನಂತರ ಅದನ್ನು ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಏಕೆಂದರೆ ಕುಡಿಯಲು ನೀರಿಲ್ಲ, ದನಕರುಗಳಿಗೆ ಮೇವಿಲ್ಲ. ಇವರು resort ರಾಜಕೀಯ ಮಾಡಿಕೊಂಡು, ದೆಹಲಿಯಲ್ಲಿ ರಾಜಕೀಯ ಮಾಡಿಕೊಂಡು ಕುಳಿತ್ತಿದ್ದರೆ ಜನ ಏನು ಮಾಡಬೇಕು? ಜನ ಗುಳೆ ಹೋಗುತ್ತಿದ್ದಾರೆ. ದನಕರುಗಳು ಸಾಯುತ್ತಿವೆ.

ಶ್ರೀ ಡಿ.ವಿ. ಸದಾನಂದಗೌಡ : ಯಾರ್ಯಾರು ಏನೇನು ಮಾಡಿದ್ದಾರೆಂಬುದೆಲ್ಲವನ್ನೂ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಯಾರ್ಯಾರು ಏನು ಮಾಡಿದ್ದಾರೆಂಬುದನ್ನು ನಿಮಗೆ ನಾನು ತೋರಿಸುತ್ತೇನೆ. ಹಿಂದಿನದನ್ನು ಹೇಳುತ್ತಾ ಕುಳಿತು ಕೊಳ್ಳುವುದಕ್ಕೆ ಆಗ time ಇತ್ತು ನಿಮಗೆ. ಈ 4 ವರ್ಷದಿಂದ ಏನು ಮಾಡಿದ್ದರೆ ಎಂಬುದನ್ನು ಹೇಳಿ. ಹಿಂದಿನದನ್ನೆಲ್ಲಾ ಹೇಳಿ ಆಗಿ ಹೋಗಿದೆ ಮುಖ್ಯಮಂತ್ರಿಗಳೆ. ಈಗಿನದನ್ನು ಹೇಳಬೇಕು.

70 ಜನ ಎಂ.ಎಲ್.ಎ. ಗಳು ಬಾರದಿದ್ದರೂ ನೀವು ಬಜೆಟ್ ಮಂಡಿಸುತ್ತಿದ್ದೀರಿ. ಪಾಪ ಡಾ: ಆಚಾರ್ಯರವರಿಗೆ ನಾವು ಶ್ರದ್ಧಾಂಜಲಿ ಅರ್ಪಿಸುತ್ತಿದ್ದೆವು, ಆದರೆ ಎಂ.ಎಲ್.ಎ. ಗಳೆಲ್ಲಾ ರೆಸಾರ್ಟ್‌ನಲ್ಲಿದ್ದರು. ಇವರು ಏನೇನು ಆಗಿದೆ ಎಂದು ಹೇಳುತ್ತಾರಂತೆ. ಆಯಿತು ಹೇಳೋಣ. ಅದೆಲ್ಲವನ್ನೂ ಹೇಳೋಣ.

ಶ್ರೀ ಡಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಯುಗಾದಿ ಹಬ್ಬ ನಿನ್ನೆ ಇನ್ನು ಮುಗಿದಿದೆ. ತಾವು ಪೀಠದಿಂದ ಯಾರಿಗೂ ಶುಭಾಶಯ ಹೇಳಲಿಲ್ಲ. ನೀವು ಶುಭಾಶಯಗಳನ್ನು ಹೇಳಬೇಕು. ನಾವು ಅಂದುಕೊಂಡಿದ್ದು ಏನು? ಇದು ನಂದನ ಸಂವತ್ಸರ ಆದರೆ ನಮ್ಮ ಪಾಲಿಗೆ ನಂದನ ಸಂವತ್ಸರ ಅಲ್ಲ ಇದು. ಬರಗಾಲದ ಸಂವತ್ಸರ ಆಗಿ ಹೋಗಿದೆ! ಆ ಕಾರಣಕ್ಕಾಗಿ ಬರದ ಬಗ್ಗೆ ಚರ್ಚೆ ಮಾಡಬೇಕೆಂದರೆ ಕೊನೆಯ ಪಕ್ಷ ಚರ್ಚೆ ಮಾಡುತ್ತೇವೆಂದು ಜನರಿಗೆ ಗೊತ್ತಾಗಲಿ. ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ ಎನ್ನುವುದಕ್ಕಿಂತ ಹೆಚ್ಚಾಗಿ ರಾಜ್ಯದ ಜನರಿಗೆ ಒಂದು ಸಂದೇಶ ಹೋಗಬೇಕಾಗುತ್ತದೆ. ದಯಮಾಡಿ ತಾವು ಪೀಠದಿಂದ ಸಂದೇಶ ಕೊಡುವುದರ ಜೊತೆಗೆ ಇದಕ್ಕೆ ಆದ್ಯತೆ ಎಂಬುದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಪೀಠದಿಂದ ಬಂದರೆ ತದನಂತರ ಚರ್ಚೆ ಮಾಡೋಣ.

ಸಭಾಧ್ಯಕ್ಷರು : ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.